ಧಾರವಾಡದಲ್ಲಿ ಬಸ್ ನಿಲ್ದಾಣದ ಕಟ್ಟಡ

577 - ಶ್ರೀ ಚಂದ್ರಕಾಂತ್ ಬೆಲ್ಲದ (ಧಾರವಾಡ) : ಮಾನ್ಯ ಸಾರಿಗೆ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) *ಧಾರವಾಡದ ಮುಖ್ಯ ವಾಹನಗಳ ನಿಲ್ದಾಣದ ಭೂಮಿ ಪೂಜ ಆಡಿಗಲ್ಲು ಎಂದು ಹಾಕಲಾಯಿತು?*

ಆ) *ಧಾರವಾಡದ ಮುಖ್ಯ ವಾಹನಗಳ ಹಾಗೂ ನಗರ ವಾಹನಗಳ ಎರಡು ನಿಲ್ದಾಣಗಳು ಬಹಳ ಚಿಕ್ಕದಾಗಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ, ಬಂದಿದ್ದರೆ ಈ ಎರಡೂ ನಿಲ್ದಾಣಗಳ ಕಟ್ಟಡ ಕಟ್ಟುವ ಯೋಜನೆ ಯಾವಾಗ ಪ್ರಾರಂಭವಾಗುವುದು?*

ಶ್ರೀ ಕೆ.ಎಸ್. ಬೀಳಗಿ (ಸಾರಿಗೆ ಸಚಿವರು) :

ಅ) 20-1-1995 ರಂದು ಶಂಕುಸ್ಥಾಪನೆಯನ್ನು ನೆರವೇರಿಸಲಾಗಿದೆ.

ಆ) ಬಂದಿರುತ್ತದೆ. ವಿಶಾಲ ಹಾಗೂ ಸುಸಜ್ಜಿತವಾದ ನೂತನ ಬಸ್ ನಿಲ್ದಾಣವನ್ನು ನಿರ್ಮಿಸಲು ಧಾರವಾಡ ನಗರದ ಗುಲಗಂಜಿ ಕೊಪ್ಪದಲ್ಲಿ 7 ಎಕರೆ 7ಗುಂಟೆ ಸರ್ಕಾರಿ ಜಮೀನನ್ನು ಪಡೆಯಲಾಗಿದೆ. ಇದನ್ನು ಕಾರಾಗೃಹ ಇಲಾಖೆಯವರು ಅತಿಕ್ರಮಿಸಿರುವುದರಿಂದ ತೆರವುಗೊಳಿಸಲು ಪ್ರಯತ್ನಿಸಲಾಗುತ್ತಿದೆ. ನಿಲ್ದಾಣ ನಕ್ಷೆ ಅಂದಾಜು ಪಟ್ಟಿ ವಿನ್ಯಾಸ ತಯಾರಿಸಲಾಗುತ್ತಿದೆ. ವಿವಾದವು ಇತ್ಯರ್ಥಗೊಂಡ ನಂತರ ಬಸ್ ನಿಲ್ದಾಣ ನಿರ್ಮಿಸುವ ಕಾರ್ಯವನ್ನು ಕೈಗೆತ್ತಿಕೊಳ್ಳಲಾಗುವುದು.

ರಾಜ್ಯದಲ್ಲಿ ಕೃಷಿ ಸಂಶೋಧನಾ ಕೇಂದ್ರಗಳ ಕುರಿತು

579 - ಶ್ರೀ ಚಂದ್ರಕಾಂತ ಬೆಲ್ಲದ್ (ಧಾರವಾಡ) : ಮಾನ್ಯ ಕೃಷಿ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) *ರಾಜ್ಯದಲ್ಲಿರುವ ಕೃಷಿ ಇಲಾಖೆಯ ಫಾರ್ಮ ಮತ್ತು ಸಂಶೋಧನಾ ಕೇಂದ್ರಗಳ ಸಂಖ್ಯೆ ಎಷ್ಟು? ಅವುಗಳ ಭೂಮಿಯ ವಿಸ್ತೀರ್ಣ ಹಾಗೂ ಸೌಲಭ್ಯಗಳು ಯಾವ ಬೆಳೆಗಳ ಸಂಶೋಧನೆ ಹಾಗೂ ಉತ್ಪಾದನೆಗಳನ್ನು ನಡೆಸಿವೆ?*

ಆ) *ಪ್ರತಿಯೊಂದು ಫಾರಂ ಮತ್ತು ಸಂಶೋಧನಾ ಕೇಂದ್ರಗಳಲ್ಲಿ ಎಷ್ಟು ಹಣ ಪ್ರತಿ ವರ್ಷ ಖರ್ಚು ಮಾಡಲಾಗುತ್ತಿದೆ? ಅವುಗಳಿಂದ ಬರುವ ಆದಾಯವೇನು? ಹಾಗೂ ಅವುಗಳಿಂದ ರೈತರಿಗೆ ದೊರಕುವ ಪ್ರತಿಫಲವೇನು?*

ಇ) *ಈ ಎಲ್ಲಾ ಫಾರಂ ಹಾಗೂ ಸಂಶೋಧನಾ ಕೇಂದ್ರಗಳನ್ನು ಕೃಷಿ ವಿಶ್ವವಿದ್ಯಾನಿಲಯಗಳಿಗೆ ಕೊಡುವುದು ಹೆಚ್ಚು ಪ್ರಯೋಜನಕಾರಿ ಎಂದು ಸರ್ಕಾರಿ ಗಮನಿಸಿದೆಯೇ?*

ಈ) *ಕೃಷಿ ಉತ್ಪಾದನೆಯಲ್ಲಿ ರೈತರಿಗೆ ಸಹಾಯ ಮಾಡುವ ವಿಸ್ತರಣಾ ಯೋಜನೆ ಏನಾದರೂ ಸರ್ಕಾರದವರು ರೂಪಿಸಿರುವರೆ ಹಾಗಿದ್ದಲ್ಲಿ ಯೋಜನೆಯ ವಿವರವೇನು?*

ಶ್ರೀ ಸಿ. ಬೈರೇಗೌಡ (ಕೃಷಿ ಸಚಿವರು) :

ಅ) ರಾಜ್ಯದಲ್ಲಿ ಕೃಷಿ ಇಲಾಖೆಯ ಅಡಿಯಲ್ಲಿ ಒಟ್ಟು 74 ಫಾರಂಗಳಿದ್ದು, ಅವುಗಳ ಒಟ್ಟು ವಿಸ್ತೀರ್ಣ 2000 ಹೆಕ್ಟೇರು ಇರುತ್ತದೆ ಮತ್ತು ಕೃಷಿ ವಿಶ್ವವಿದ್ಯಾನಿಲಯಗಳ ಅಡಿಯಲ್ಲಿ ಒಟ್ಟು 55 ವಿಸ್ತೀರ್ಣ 6,500 ಹೆಕ್ಟೇರುಗಳಾಗಿರುತ್ತದೆ. ಇವುಗಳಲ್ಲಿ ಸಾಕಷ್ಟು ಸೌಲಭ್ಯಗಳನ್ನು ಅಂದರೆ ನೀರಾವರಿ ಮತ್ತು ಇತರೆ ಸೌಲಭ್ಯಗಳನ್ನು ಒದಗಿಸಲಾಗಿದೆ. ಈ ಕೇಂದ್ರಗಳಲ್ಲಿ ತಳಿವರ್ಧಕ ಬೀಜಗಳು ಹಾಗೂ ಮೂಲಬೀಜಗಳ ಉತ್ಪಾದನೆಗಳನ್ನು ಕೈಗೊಂಡಿದ್ದು ಇವುಗಳಲ್ಲಿ ಪ್ರಮುಖ ಬೆಳೆಗಳಾದ ಮುಸುಕಿನ ಜೋಳ, ಜೋಳ, ಶೇಂಗಾ, ರಾಗಿ, ತೊಗರಿ, ತೋಟಗಾರಿಕೆ ಬೆಳೆಗಳು, ಹಣ್ಣಿನ ಬೆಳೆಗಳು ಮುಂತಾದವುಗಳನ್ನು ಉತ್ಪಾದಿಸಲಾಗುತ್ತಿದೆ.

ಆ) ಈ ಎಲ್ಲಾ ಫಾರಂಗಳು ಮತ್ತು ಸಂಶೋಧನಾ ಕೇಂದ್ರಗಳ ನಿರ್ವಹಣಾ ಒಟ್ಟು ಅಂದಾಜು ವೆಚ್ಚವು ರೂ. 1296 ಲಕ್ಷಗಳಾಗಿರುತ್ತದೆ ಹಾಗೂ ಇವುಗಳಿಂದ ಬರುವ ಆದಾಯವು ರೂ. 344 ಲಕ್ಷಗಳಾಗಿರುತ್ತದೆ. ಈ ಕೇಂದ್ರಗಳನ್ನು ಲಾಭಗಳಿಸುವ ದೃಷ್ಟಿಯಿಂದ ಅಲ್ಲದೆ, ರೈತರಿಗೆ ಸಂಶೋಧನಾ ಫಲಗಳನ್ನು ನೀಡುವ ದೃಷ್ಟಿಯಿಂದ ಸ್ಥಾಪಿಸಲಾಗಿದೆ. ಈ ಕೇಂದ್ರಗಳಲ್ಲಿ ಉತ್ಪಾದಿಸಲಾಗುವ ತಳಿವರ್ಧಕ ಬೀಜ ಹಾಗೂ ಮೂಲ ಬೀಜಗಳಿಂದ ರೈತರಿಗೆ ನೇರವಾಗಿ ಪ್ರತಿಫಲ ದೊರೆಯುತ್ತದೆ. (ಪ್ರತಿಯೊಂದು ಫಾರಂ ಮತ್ತು ಸಂಶೋಧನಾ ಕೇಂದ್ರದ ವಿವರಗಳನ್ನು ಬೇರೆಯದಾಗಿ ನೀಡುವ ಬಗ್ಗೆ ಸಮಯ ಕೋರಿದೆ)

ಇ) ರಾಜ್ಯದಲ್ಲಿರುವ ಎಲ್ಲಾ ಸಂಶೋಧನಾ ಕೇಂದ್ರಗಳನ್ನು ಕೃಷಿ ವಿಶ್ವವಿದ್ಯಾನಿಲಯಗಳಡಿಯಲ್ಲಿಯೇ ಇಡಲಾಗಿದೆ. ಕೃಷಿ ಇಲಾಖೆಯಡಿಯಲ್ಲಿರುವ ಫಾರಂಗಳನ್ನು ಕೃಷಿ ವಿಶ್ವವಿದ್ಯಾನಿಲಯಗಳಿಗೆ ನೀಡುವಂತೆ ಎಲ್ಲೆಲ್ಲಿ ಬೇಡಿಕೆ ಬಂದಿತೋ, ಅಲ್ಲಿ ಅವುಗಳನ್ನು ಈಗಾಗಲೇ ಕೃಷಿ ವಿಶ್ವವಿದ್ಯಾನಿಲಯಗಳ ವಶಕ್ಕೆ ನೀಡಲಾಗಿದೆ. ಇನ್ನು ಮುಂದೆ ಕೂಡ ಯಾವುದೇ ಫಾರಂಗಳನ್ನು ನೀಡುವಂತೆ ಕೃಷಿ ವಿಶ್ವವಿದ್ಯಾನಿಲಯಗಳಿಂದ ಬೇಡಿಕೆ ಏನಾದರೂ ಬಂದಲ್ಲಿ ಅವುಗಳನ್ನು ಸೂಕ್ತವಾಗಿ ಪರಿಶೀಲಿಸಲಾಗುವುದು.

ಈ) ಕೃಷಿ ವಿಶ್ವವಿದ್ಯಾನಿಲಯಗಳು, ಭಾರತೀಯ ಕೃಷಿ ಅನುಸಂಧಾನ ಪರಿಷತ್ (ಐ.ಸಿ.ಎ.ಆರ್) ಮುಂತಾದವುಗಳಿಂದ ಆಗಿಂದಾಗ್ಗೆ ರೂಪಿಸುವ ತಂತ್ರಜ್ಞಾನವನ್ನು ರೈತರಿಗೆ ತಲುಪಿಸಿ, ಅವರುಗಳೂ ಸಹ ಈ ತಂತ್ರಜ್ಞಾನವನ್ನು ಅಳವಡಿಸಿಕೊಂಡು ಕೃಷಿ ಉತ್ಪಾದನೆಯನ್ನು ಹೆಚ್ಚಿಸುವಂತೆ ಅವರುಗಳನ್ನು ಪ್ರೇರೇಪಿಸುವ ದಿಸೆಯಲ್ಲಿ ಹಾಲಿ ಇರುವ ರಾಷ್ಟ್ರೀಯ ವಿಸ್ತರಣಾ ಯೋಜನೆಯು ಪರಿಣಾಮಕಾರಿಯಾದ ಪಾತ್ರ ಬೀರಿದೆ. ಅಲ್ಲದೇ ಇತ್ತೀಚೆಗೆ ಕೃಷಿ ಇಲಾಖೆಯನ್ನು ಸಮಗ್ರವಾಗಿ ಪುನರ್ ರಚಿಸಿರುವುದರ ಮೂಲರ ಹಿಂದೆ ವೃತ್ತಮಟ್ಟದಲ್ಲಿ ಕೃಷಿ ನಾಯಕರನ್ನು ಈಗ ಪ್ರತಿ ಗ್ರಾಮ ಪಂಚಾಯಿತಿ ಮಟ್ಟದಲ್ಲಿ ಇಡಲಾಗಿದೆ. ಅಲ್ಲದೆ ವಲಯಮಟ್ಟದಲ್ಲಿ ಸಹಾಯಕ ಕೃಷಿ ಅಧಿಕಾರಿಗಳ ಕಾರ್ಯಾಲಯವನ್ನು ಸಹ ಈ ಪುನರ್‌ರಚನೆಯಲ್ಲಿ ತೆರೆಯಲಾಗಿದೆ. ಈ ವ್ಯವಸ್ಥೆಯು ಕೃಷಿ ಕ್ಷೇತ್ರದಲ್ಲಿ ಆಧುನಿಕ ತಾಂತ್ರಜ್ಞಾನವನ್ನು ಇನ್ನು ಹೆಚ್ಚು ಪರಿಣಾಮಕಾರಿಯಾಗಿ ರೈತರಿಗೆ ತಲುಪಿಸುವ ದಿಸೆಯಲ್ಲಿ ಪರಿಣಾಮಕಾರಿಯಾಗಿದೆ ಎಂದು ಹೇಳಬಹುದಾಗಿದೆ.